# 21

# “ದೇವರೊಡನೆ ಸಮಾನವಾಗಿರುವದು”

## ಯೋಹಾನ 5:16-47, ಒಂದು ನಿಕಟ ನೋಟ

ಆತನ ಶ್ರೇಷ್ಟ ಗಲಿಲಾಯದ ಸೇವೆಯ ಆರಂಭದಲ್ಲಿ, ಯೇಸು ಯೆರೂಸಲೇಮಿಗೆ ಒಂದು ಪ್ರಯಾಣವನ್ನು ಬೆಳಿಸಿದನು. ಆಗ ಅಲ್ಲಿ, ಆತನು ಬೆತ್ಸಥಾ ಕೊಳದ ಬಳಿಯಲ್ಲಿರುವ ಒಬ್ಬ ಮನುಷ್ಯನನ್ನು ಸ್ವಸ್ಥಮಾಡಿದನು (ಯೋಹಾನ 5:2, 5, 8, 9). ಈ ಘಟನೆಯನ್ನು ಹೇಳುವಲ್ಲಿ ಯೋಹಾನನು “ಆ ದಿವಸ ಸಬ್ಬತ್ ದಿನವಾಗಿತ್ತು” ಎಂಬ ಸಂಕ್ಷಿಪ್ತವಾದ ವ್ಯಾಖ್ಯಾನವನ್ನು ಸೇರಿಸುತ್ತಾನೆ (ವಚನ 9).[1]

### ಆರೋಪಕ್ಕೊಳಪಡಿಸುವ ಆಪಾದನೆಗಳು (ವಚನಗಳು 16-18)

ಸ್ವಸ್ಥತೆಯ ಪರಿಣಾಮವು ಯೆಹೂದಿ ಅಧಿಕಾರಿಗಳೊಡನೆ ಮುಖಾಮುಖಿ ಸಂಘರ್ಷವೇ ಆಗಿತ್ತು. ಸಬ್ಬತ್ತನ್ನು ಮುರಿದಿದ್ದಕ್ಕಾಗಿ ಧಾರ್ಮಿಕ ಮುಖಂಡರು ಯೇಸುವನ್ನು ದೂಷಿಸಿದರು.[2]

ನಮ್ಮ ಕರ್ತನ ಪ್ರತ್ಯುತ್ತರವು “ನನ್ನ ತಂದೆಯು ಇಂದಿನವರೆಗೆ ಕೆಲಸಮಾಡುತ್ತಾನೆ, ನಾನೂ ಕೆಲಸ ಮಾಡುತ್ತೇನೆ” (ವಚನ 17) ಎಂದಾಗಿತ್ತು. ಇನ್ನೊಂದು ಮಾತಿನಲ್ಲಿ, “ದೇವರು ಏಳನೇಯ ದಿನದಲ್ಲಿ ವಿಶ್ರಾಂತಿ ಪಡೆದನು ಎಂಬುದು ನಿಜ,[3] ಆದರೆ ಒಳ್ಳೆಯದನ್ನು ಮಾಡುವುದನ್ನು ಆತನು ನಿಲ್ಲಿಸಿದನು ಎಂದು ಅದರ ಅರ್ಥವಲ್ಲ. ಸಬ್ಬತ್ ದಿನದಲ್ಲೂ ಕೂಡಾ ಆತನು ಸೃಷ್ಟಿಯನ್ನು ಸಂರಕ್ಷಿಸುವವನಾಗಿದ್ದಾನೆ.[4] ಸಬ್ಬತ್ ದಿನದಲ್ಲೂ ಕೂಡಾ ಆತನು ಸೂರ್ಯನ ಬೆಳಕನ್ನೂ ಮತ್ತು ಮಳೆಯನ್ನೂ ಕಳಿಹಿಸುವವನಾಗಿದ್ದಾನೆ” ಎಂದು ಹೇಳಬಹುದು.[5] ಯೇಸುವಿನ ವಾದವು ಏಳನೆಯ ದಿನದಂದು ದೇವರು ಜನರಿಗೆ ಸಹಾಯ ಮಾಡುತ್ತಿರುವುದರಿಂದ; ಆ ದಿನದಲ್ಲಿ ತಾನು (ಅದು ಯೇಸು) ಜನರಿಗೆ ಸಹಾಯ ಮಾಡುವುದು ತನಗೋಸ್ಕರ ಸರಿಯಾದದ್ದು ಎಂದಾಗಿತ್ತು.

ಆತನ ವಾದದಲ್ಲಿನ ವಿಮಕ್ಷೆಗಳನ್ನು ನೋಡಿದಾಗ ಕ್ರಿಸ್ತನ ಮಾತುಗಳು ಯೆಹೂದಿ ನಾಯಕರನ್ನು ಕೋಪಕ್ಕೀಡು ಮಾಡಿತು. ಮೊದಲಿಗೆ ಆತನು “ನನ್ನ ತಂದೆಯು” ಎಂದು ಹೇಳಿದ್ದು ಆಗಿತ್ತು. ಜನರು ಸಾಮಾನ್ಯವಾಗಿ “ನಮ್ಮ ತಂದೆ” ಎಂದು ಹೇಳುತ್ತಾರೆ (ಮತ್ತಾಯ 6:9; ರೋಮಾಪುರ 1:7; 1 ಕೊರಿಂಥ 1:3), ಆದರೆ ಯೇಸು “*ನನ್ನ* ತಂದೆ” ಎಂದು ಹೇಳಿದ್ದು (ಮತ್ತಾಯ 7:21; 10:32; 11:27) - ವಿಶೇಷ ಸಂಬಂಧವನ್ನು ಸೂಚಿಸುವುದಾಗಿದೆ. ಎರಡನೆಯದಾಗಿ, ತಾನೂ ತನ್ನ ದೇವರು ಇಬ್ಬರೂ ಒಂದೆ ಕಾರ್ಯದಲ್ಲಿ ತೊಡಗಿಕೊಂಡಿರುವುದಾಗಿ ಚಿತ್ರಣವನ್ನು ಕೊಡುತ್ತಾನೆ; “ನನ್ನ ತಂದೆಯು ... ಕೆಲಸ ಮಾಡುತ್ತಾನೆ, ನಾನು ಕೆಲಸ ಮಾಡುತ್ತೇನೆ” ಇದರ ಪರಿಣಾಮವಾಗಿ “ದೇವರನ್ನು ತನ್ನ *ತಂದೆ ಎಂದು ಹೇಳಿ ತನ್ನನ್ನು ದೇವರಿಗೆ ಸರಿಗಟ್ಟಿಕೊಂಡನೆಂದು* ಯೆಹೂದ್ಯರು ಆತನನ್ನು ಕೊಲ್ಲುವುದಕ್ಕೆ ಮತ್ತಷ್ಟು ಪ್ರಯತ್ನವನ್ನು ಮಾಡಿದರು” (ವಚನಗಳು 17, 18; ಒತ್ತಿ ಹೇಳಿದ್ದು ನನ್ನದು).

ಉದಾರವಾದಿ ತತ್ವಜ್ಞಾನಿಗಳು ಸುವಾರ್ತೆಯ ವಿವರಣೆಯನ್ನು ಓದಬಹುದಿತ್ತು ಮತ್ತು ಯೇಸು ಎಂದಿಗೂ ತಾನು ದೇವರ ಮಗ ಎಂದು ಪ್ರತಿಪಾದಿಸಿಲ್ಲ, ಎಂದಿಗೂ ದೈವತ್ವದ ಬಗೆಗೆ ಪ್ರತಿಪಾದಿಸಿಲ್ಲ ಎಂದು ಹೇಳಬಹುದಿತ್ತು. ಕ್ರಿಸ್ತನ ದಿನಗಳಲ್ಲಿ ಧಾರ್ಮಿಕ ಮುಖಂಡರಿಗೆ ಆತನ ಮಾತುಗಳ ಮಹತ್ವವನ್ನು ಅರಿತುಕೊಳ್ಳುವಲ್ಲಿ ಯಾವ ತೊಂದರೆಯೂ ಇರಲಿಲ್ಲ.

ತಾನು "ದೇವರಿಗೆ ಸಮಾನನು" ಎಂಬ ಅರ್ಥವನ್ನು ಸೂಚಿಸುವದನ್ನು ಯೇಸು ಮಾಡಿಲ್ಲವಾದರೆ "ಓಹ್, ನೀವು ನನ್ನನ್ನು ಅಪಾರ್ಥಮಾಡಿಕೊಂಡಿದ್ದೀರಿ, ನಾನು ಹೇಳ ಬೇಕಾದದ್ದು ಇದಲ್ಲ." ಎಂದು ಇಂದು ಹೇಳುವದು ಆತನಿಗೆ ಸುಲಭವಾಗಿರುತ್ತಿತ್ತು. ಆತನು ಅವರ ಆಪಾಧನೆಯನ್ನು ಅಲ್ಲಗಳೆಯಲಿಲ್ಲ, ಆದರೆ ಅವರ ದೂಷಿಸುವಿಕೆಯನ್ನು ತನ್ನ ತಂದೆಯೊಡನೆಯ ಸಂಬಂಧದ ಶ್ರೇಷ್ಟ ಉಪದೇಶವನ್ನು ಕೊಡುವ ಒಂದು ಅವಕಾಶವನ್ನಾಗಿ ಬಳಸಿಕೊಂಡನು. ಯೋಹಾನ ಪುಸ್ತಕದಲ್ಲಿ ಇದು ಒಂದು ಶ್ರೇಷ್ಟ ಪ್ರಸಂಗವಾಗಿದೆ. ಪ್ರತಿಯೊಂದೂ ವಚನವನ್ನೂ ಆಳವಾಗಿ ಅಭ್ಯಾಸಿಸಲು ನಮಗಾಗದು, ಆದರೆ ಮೂಲ ವಿಚಾರಗಳನ್ನು ನಾವಿಲ್ಲಿ ಎತ್ತಿತೋರಿಸಬಹುದು.

## ನಂಬಿಕೆಗೂ ಮೀರಿದ ಪ್ರತಿಪಾದನೆ (ವಚನಗಳು 19-30)

### ಯೇಸುವಿನ ವಾಗ್ದಾನ

ಯೇಸುವಿನ ಮೂಲ ಆಧಾರ ವಚನವು ಆತನು ಮತ್ತು ಆತನ ತಂದೆಯು ಮಾಡುವ ಎಲ್ಲ ಕಾರ್ಯದಲ್ಲಿ ಒಂದಾಗಿರುವರು ಎಂದು. "ತನ್ನನ್ನು ದೇವರೊಂದಿಗೆ ಸರಿಗಟ್ಟಿಕೊಳ್ಳುವನು" ಎಂಬ ಪದಪುಂಜವು ಯೇಸು ತನ್ನನ್ನು ತಾನು ದೇವರ ಪ್ರತಿಸ್ಪರ್ದಿಯೆಂದು ಯೋಚಿಸುತ್ತಿದ್ದಾನೆ ಎಂಬ ಅರ್ಥವನ್ನು ಕೊಡುವುದಾಗಿದೆ, ಆದರೆ ಅದು ಹಾಗಲ್ಲ. "ಮಗನು ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು" ಎಂದು ಒತ್ತಿ ಹೇಳಿದನು (ವಚನ 19). ತಿರುಗಿ, ಆತನು "ನನ್ನಷ್ಟಕ್ಕೆ ನಾನು ಏನೂ ಮಾಡಲಾರೆನು" ಎಂದು ಹೇಳಿದನು (ವಚನ 30).

### ಉದಾಹರಣೆಗಳು

ತಾನು ತನ್ನ ತಂದೆಯೂ ಹೇಗೆ ಒಟ್ಟಾಗಿದ್ದಾರೆ ಎಂಬುದಕ್ಕೆ ಯೇಸು ಅನೇಕ ಉದಾಹರಣೆಗಳನ್ನು ಕೊಡುತ್ತಾನೆ. ವಚನ 21ರಿಂದ 30ವರೆಗೆ ಮೂರು ವಿಷಯಗಳು ಮತ್ತೇ ಕಾಣಿಸಿಕೊಳ್ಳುತ್ತಾ ಮತ್ತು ಮನುಕುಲದ ನ್ಯಾಯತೀರ್ಪು. ಜೀವವನ್ನು ಕೊಡುವದು, ಮರಣದಿಂದ ಎಬ್ಬಿಸುವದು, ಮತ್ತು ಮೇಲಿಂದ ಮೇಲೆ ಬರುತ್ತಾ ಇರುವವುಗಳು ಆಗಿವೆ ಅವುಗಳು, ಜೀವನವನ್ನು ಕೊಡುವದು, ಮರಣದಿಂದ ಎಬ್ಬಿಸುವದು, ಮತ್ತು ನ್ಯಾಯ ತೀರ್ಪಿನ ಘೋಷಣೆ ಇದು ದೇವರ ಸರ್ವಾಧಿಕಾರ (ಮತ್ತು ಆತನೊಬ್ಬನದೇ) ಎಂದು ಯೆಹೂದಿಗಳು ಯೋಚಿಸುವವರಾಗಿದ್ದರು[6] - ಆದರೆ ತಾನು ಮತ್ತು ದೇವರು ಈ ಕಾರ್ಯದ ಜೊತೆ ಕೆಲಸಗಾರರು ಎಂದು ಕ್ರಿಸ್ತನು ದೃಹಿಕವಾಗಿ ಪ್ರತಿಪಾದಿಸಿದನು.

(1) *ಜೀವವನ್ನು ಕೊಡುವುದರಲ್ಲಿ ಒಟ್ಟಾಗಿದ್ದಾರೆ.* ಯೇಸು ಮೊದಲು ಜೀವವನ್ನು ಕೊಡುವುದರ ಬಗೆಗೆ ಮಾತನಾಡಿದನು: "ತಂದೆಯು ಹೇಗೆ ಸತ್ತವರನ್ನು ಎಬ್ಬಿಸಿ ಬದುಕಿಸುತ್ತಾನೋ ಹಾಗೆಯೇ ಮಗನೂ ಸಹ ತನಗೆ ಬೇಕಾದವರನ್ನು ಬದುಕಿಸುತ್ತಾನೆ" (ವಚನ 21). "ನಿಮಗೆ ನಿಜನಿಜವಾಗಿ ಹೇಳುತ್ತೇನೆ ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸದಾತನನ್ನು[7] ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ.[8] ಅವನು ನ್ಯಾಯ ತೀರ್ಪಿಗೆ[9] ಗುರಿಯಾಗುವುದಿಲ್ಲ; ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ" (ವಚನ 24) ಎಂಬ ಈ ಸಮಯದಲ್ಲಿನ ಬೋಧನೆಯು ಬಹುಶಃ ಯೇಸುವು ಆತ್ಮೀಕ ಜೀವವನ್ನು ಕೊಡುವವನು ಎಂದು ಸೂಚಿಸುವದಾಗಿರಬಹುದು.

(2) *ಮರಣದಿಂದ ಎಬ್ಬಿಸುವಲ್ಲಿ ಜೊತೆಯಾಗಿರುವಿಕೆ.* ವಚನ 21ರಲ್ಲಿನ ಪ್ರತಿಪಾದನೆಯು ದೇಹದ ಜೀವಿತ ಕೊಡುವುದನ್ನು ಸಹ ಒಳಗೊಂಡಿದೆ ಯೆಹೂದಿಗಳು ತಾನು "ಹಿಂದೆಂದೂ ಕಾಣದ ದೊಡ್ಡ ಕೆಲಸಗಳನ್ನು" (ಅದ್ಭುತ ಕಾರ್ಯಗಳನ್ನು) ಮಾಡುವದನ್ನು ನೋಡುವರು ಮತ್ತು "ಅವರು ಅತ್ಯಾಶ್ಚರ್ಯಪಡುವರು" (ವಚನ 20) ಎಂದು ಯೇಸು ಮುಂತಿಳಿಸಿದ್ದನು.

ಇದು ಕ್ರಿಸ್ತನು ಮರಣದಿಂದ ಎಬ್ಬಿಸುವುದಕ್ಕಿಂತ ಮುಂಚಿನ ಆತನ ವೈಯಕ್ತಿಕ ನಿಯೋಗದ[10] ಆಧಾರವಿರಬೇಕು - ವಿಶೇಷವಾಗಿ ಯೆರೂಸಲೇಮನ್ನು ಅಲುಗಾಡಿಸಿದಕ್ಕೆ ಕಾರಣವಾದ ಲಾಜರನ್ನು ಎಬ್ಬಿಸಿದ ಘಟನೆಯೇ ಆಗಿರಬಹುದು (ಯೆಹಾನ 11:1-48; 12:1, 9-11).

ಭೂಮಿಯ ಮೇಲಿರುವಾಗ ಯೇಸುವಿನ ಶಕ್ತಿಯು ಮುಷ್ಟಿಯಷ್ಟು ಜನರನ್ನು ಮರಣದಿಂದ ಎಬ್ಬಿಸುವಿಕೆಗಿಂತ ಮೀರಿ ಹೋಯಿತು. ಕೊನೆಯ ಈ ಕಾಲವನ್ನು ಮುಂದಾಗಿ ಗ್ರಹಿಸಿ, ಆತನು ಇದನ್ನು ಪ್ರಕಟಿಸಿದನು,

> ... ಸಮಾಧಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ [ಅದು ಮನುಷ್ಯಕುಮಾರನ ಧ್ವನಿ; ವಚನ 27] ಎದ್ದು ಹೊರಗೆ ಬರುವ ಕಾಲವು ಬರುತ್ತದೆ. ಒಳ್ಳೆಯದನ್ನು ಮಾಡಿದವರಿಗೆ[11] ಜೀವಕ್ಕಾಗಿ ಪುನರುತ್ಥಾನವಾ ಗುವದು; ಕೆಟ್ಟದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು (ವಚನಗಳು 28, 29).

ಎರಡನೆಯ ಬರೋಣದಲ್ಲಿ ಮನುಕುಲದವರೆಲ್ಲರು ಸಾಮಾನ್ಯವಾಗಿ ಪುನರುತ್ಥಾನಕ್ಕೆ ಸಂಬಂಧಿಸಿದಂತೆ ಇದು ಸ್ಪಷ್ಟವಾದ ಮತ್ತು ಸಂಕ್ಷಿಪ್ತವಾದ ಹೇಳಿಕೆಯಾಗಿದೆ.

(3) *ಜೊತೆಯಾದ ನ್ಯಾಯತೀರ್ಪು.* ವಚನ 28 ಮತ್ತು 29 ಸೂಚಿಸುವ ಹಾಗೆ ಪುನರುತ್ಥಾನದ ನಂತರ ನ್ಯಾಯತೀರ್ಪು ಹಿಂಬಾಲಿಸುತ್ತದೆ. ಈ ಕೆಲಸದಲ್ಲೂ ಕೂಡಾ, ಯೇಸು ತನ್ನ ತಂದೆಯ ಜೊತೆಗೆ ಇರುವವನಾಗಿದ್ದಾನೆ. "ತಂದೆಯೂ ಯಾರಿಗೂ ತೀರ್ಪು ಮಾಡುವದು ಇಲ್ಲ; ತೀರ್ಪುಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ" ಎಂದು ಹೇಳುತ್ತಾನೆ[12] (ವಚನ 22). ದೇವರು ತನ್ನ "ಮಗನು ಮನುಷ್ಯಕುಮಾರನಾಗಿರುವದರಿಂದ ತೀರ್ಪು ಮಾಡುವ ಅಧಿಕಾರವನ್ನು ಅವನಿಗೆ ಕೊಟ್ಟನು" (ವಚನ 27) ಎಂದು ಆತನು ಸೂಚಿಸುವವನಾಗಿದ್ದಾನೆ. "ನಾನು ಮಾಡುವ ತೀರ್ಪು ನ್ಯಾಯವಾದದ್ದಾಗಿದೆ" (ವಚನ 30) ಎಂದು ತಿರುಗಿ ಆತನು ಪ್ರತಿಪಾದಿಸುವವನಾಗಿದ್ದಾನೆ.

ಜೀವವನ್ನು ಕೊಡುವುದರಲ್ಲಿ, ಮರಣದಿಂದ ಎಬ್ಬಿಸುವಲ್ಲಿ ಮತ್ತು ನ್ಯಾಯತೀರ್ಪಿನಲ್ಲಿ ಯೇಸು ಮತ್ತು ಆತನ ತಂದೆಯ ಜೊತೆಯಿರುವುದರಿಂದ ಆತನ ಕೇಳುಗರ ಪ್ರತಿಕ್ರಿಯೆಯು ಏನಾಗಿರಬಹುದಾಗಿದೆ? ಪ್ರತಿಯೊಬ್ಬರು "ತನಗೆ ಮಾನಕೊಡುವ ಪ್ರಕಾರವೇ ಮಗನಿಗೂ ಮಾನಕೊಡಬೇಕೆಂದು ತಂದೆಯು ಇಚ್ಛಿಸುತ್ತಾನೆ" ಎಂದು ಯೇಸು ಹೇಳುತ್ತಾ "ಮಗನಿಗೆ ಮಾನಕೊಡದವನು ಅವನನ್ನು ಕಳುಹಿಸಿದ ತಂದೆಗೂ ಮಾನಕೊಡದವನಾಗಿದ್ದಾನೆ" ಎಂದು ಸೇರಿಸುತ್ತಾನೆ (ವಚನ 23).

ಯೇಸು ಮಾಡಿದ್ದು ಎಂಥ ದಿಟ್ಟ ಪ್ರತಿಪಾದನೆ! ತಾನೇನನ್ನು ಹೇಳುತ್ತಿದ್ದಾನೋ ಅದು ನಿಜವೋ ಅಥವಾ ತಾನು ಹೇಳಿಕೆಯನ್ನು ಹಿಂತೆಗೆದುಕೊಳ್ಳುವನೂ ಎಂಬುದನ್ನು ಸಾಧಿಸಲು ಆತನು ಒತ್ತಾಯಿಸಲ್ಪಟ್ಟನು.[13]

## ಪ್ರಶ್ನಿಸಲಾಗದ ಸಾಮರ್ಥ್ಯಗಳು (ವಚನಗಳು 31-47)

ತಾನು ಮತ್ತು ತನ್ನ ಪ್ರತಿಪಾದನೆಗಳು ವಿಚಾರಣೆ ಗೀಡಾಗಲಿವೆ ಎಂದು ಯೇಸು ಮನಗೊಂಡನು. ಆತನು ತನ್ನ ಪರವಾಗಿ ಪರೀಕ್ಷೆಗಾಗಿ ಹೇಳಲು ಸಾಕ್ಷಿಗಳ[14] ಸರಮಾಲೆಯನ್ನೇ ಕರೆದನು.

ಸಾಕ್ಷಿಗಾಗಿ ಆತನ ಪೀಠಿಕಾ ಹೇಳಿಕೆಯು ವಿಚಿತ್ರವೆನ್ನಿಸುತ್ತದೆ: "ನನ್ನ ವಿಷಯವಾಗಿ ನಾನೇ ಸಾಕ್ಷಿ ಹೇಳಿಕೊಂಡರೆ ನನ್ನ ಸಾಕ್ಷಿಯು ನಿಜವಾಗದು" (ವಚನ 31). "ನಾನೇ" ಎಂಬ ಪದವು ಭಾಷಾಂತರಕಾರರಿಂದ ಜೋಡಿಸಲ್ಪಟ್ಟಿದೆ. ಕ್ರಿಸ್ತನು ನಿಜವಾಗಿ "ನಾನು ನನಗಾಗಿ ಒಂದು ವೇಳೆ ಸಾಕ್ಷಿಯನ್ನು ನುಡಿದಿದ್ದಾದರೆ, ನನ್ನ ಸಾಕ್ಷಿಯು ಸತ್ಯವಾ ದದ್ದಾಗದು" ಎಂದು ಹೇಳಿದ್ದಾನೆ. ಯೇಸುವು ತನಗೋಸ್ಕರ "ಸಾಕ್ಷಿ ಹೇಳುತ್ತಿದ್ದಾನೆ" ಅಥವಾ "ಸಾಕ್ಷಿಯನ್ನು ಕೊಡುತ್ತಿದ್ದಾನೆ"

(ವಚನಗಳು 19-30). ಸಂದರ್ಭದಿಂದ ಹೊರಗೆ ಬಂದು ವಚನ 31ನ್ನು ನೋಡಿದಾಗ ಯೇಸು ಏನು ಹೇಳುತ್ತಿದ್ದಾನೂ ಅದು ಸತ್ಯವಲ್ಲ ಎಂಬಂತೆ ತೋರುವುದಾಗಿದೆ.

ಯೋಹಾನ 5ರಲ್ಲಿನ ಯೇಸುವಿನ ಪ್ರತಿಪಾದನೆಯನ್ನು ಅಧ್ಯಾಯ 8ರಲ್ಲಿನ ಪ್ರತಿಪಾದನೆಯೊಡನೆ ಹೋಲಿಸಿರಿ. ಆ ಸಂದರ್ಭದಲ್ಲಿ ಫರಿಸಾಯರು ಕ್ರಿಸ್ತನಿಗೆ "ನಿನ್ನ ವಿಷಯವಾಗಿ ನೀನೇ ಸಾಕ್ಷಿ ಹೇಳಿಕೊಳ್ಳುತ್ತೀ; ನಿನ್ನ ಸಾಕ್ಷಿಯು ನಿಜವಾಗದು" ಎಂದು ಹೇಳುತ್ತಾರೆ (ಯೋಹಾನ 8:13). "ನನ್ನ ವಿಷಯವಾಗಿ ನಾನೇ ಸಾಕ್ಷಿ ಹೇಳಿಕೊಂಡರೂ *ನನ್ನ ಸಾಕ್ಷಿ* ನಿಜವಾಗಿರುವದು" (ವಚನ 14; ಒತ್ತಿ ಹೇಳಿದ್ದು ನನ್ನದು) ಎಂದು ಯೇಸು ಉತ್ತರಿಸುತ್ತಾನೆ. ನಂತರ ಆತನು "ಇಬ್ಬರ ಸಾಕ್ಷಿಯು ನಿಜವಾಗುತ್ತದೆಂಬುದಾಗಿ ನಿಮ್ಮ ಧರ್ಮಶಾಸ್ತ್ರದಲ್ಲೇ ಬರದದೆ. ನನ್ನನ್ನು ಕುರಿತು ನಾನು ಸಾಕ್ಷಿ ಹೇಳುವವನಾಗಿದ್ದೇನೆ, ಅದಲ್ಲದೆ ನನ್ನನ್ನು ಕಳುಹಿಸಿದ ತಂದೆಯೂ ನನ್ನ ವಿಷಯವಾಗಿ ಸಾಕ್ಷಿ ಹೇಳಿದ್ದಾನೆ" ಎಂದು ಸೇರಿಸುತ್ತಾನೆ (ವಚನಗಳು 17, 18).

ಎರಡೂ ಹೇಳಿಕೆಗಳನ್ನು ಹೋಲಿಸುವಾಗ ಯೋಹಾನ 5ರಲ್ಲಿ ಯೇಸು ಸುಳ್ಳನ್ನು ಒಪ್ಪಿಕೊಳ್ಳುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅದಲ್ಲದೆ, ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಒಬ್ಬ ವ್ಯಕ್ತಿಯ ಸಾಕ್ಷಿಯು ಸಾಕಾಗದು ಎಂದು ಆತನು ಅರಿತುಕೊಂಡಿದ್ದಾನೆ. ಇಬ್ಬರು ಅಥವಾ ಮೂವರ ಸಾಕ್ಷಿಯು ಅವಶ್ಯವಾಗಿರುತ್ತದೆ (ಅರಣ್ಯಕಾಂಡ 35:30; ಧರ್ಮೋಪದೇಶಕಾಂಡ 17:6; 19:15; ನೋಡಿರಿ ಮತ್ತಾಯ 18:16). ಅಂತೆಯೇ NASBಯ ಭಾಷಾಂತರಕಾರರು ವಚನ 31ರಲ್ಲಿ "ನಾನೇ" ("alone") ಎಂಬ ಪದವನ್ನು ಸೇರಿಸಿದ್ದಾರೆ; ಕ್ರಿಸ್ತ ತನಗಾಗಿ ತಾನೊಬ್ಬನೇ ಸಾಕ್ಷಿಯನ್ನು ಕೊಟ್ಟಿದ್ದಾದರೆ, ಅದು *ಯೆಹೂದಿ ಸಭೆಯಲ್ಲಿ* ಅಂಗೀಕೃತವಾಗುತ್ತಿರಲಿಲ್ಲ.

ಆದ್ದರಿಂದ ಯೇಸು ಎರಡನೆಯ ಸಾಕ್ಷಿಯನ್ನು, ಅಧ್ಯಾಯ 8ರಲ್ಲಿ ಸೂಚಿಸಲ್ಪಟ್ಟ ಅದೇ ಸಾಕ್ಷಿ ಅಂದರೆ ತನ್ನ ತಂದೆಯನ್ನು ಸೇರಿಸಿದ್ದಾನೆ. "ನನ್ನ ವಿಷಯವಾಗಿ ಸಾಕ್ಷಿ ಹೇಳುವವನು ಮತ್ತೊಬ್ಬನಿದ್ದಾನೆ; ಆತನು ನನ್ನ ವಿಷಯವಾಗಿ ಹೇಳುವ ಸಾಕ್ಷಿ ನಿಜವೆಂದು ಬಲ್ಲನು" (ಯೋಹಾನ 5:32) ಎಂದು ಯೇಸುವು ಹೇಳುತ್ತಾನೆ. ಸಾಂದರ್ಭಿಕವಾಗಿ, ಇದು ದೇವರನ್ನು ಸೂಚಿಸುವುದಾಗಿದೆ.[15] "ನನ್ನನ್ನು ಕಳುಹಿಸಿಕೊಟ್ಟ ತಂದೆಯು ನನ್ನ ವಿಷಯವಾಗಿ ಸಾಕ್ಷಿ ಹೇಳದ್ದಾನೆ" (ವಚನ 37) ಎಂದು ಯೇಸು ಒತ್ತಿ ಹೇಳುತ್ತಾನೆ. ಅನೇಕ ಸಾಕ್ಷಿಗಳನ್ನು ಉತ್ಪಾದಿಸಬಹುದು, ಆದರೆ ಪ್ರತಿಯೊಬ್ಬರ ಸಾಕ್ಷಿಯು ಒಂದು ನಿರ್ಧಿಷ್ಟವಾದ ಸಾಕ್ಷಿಯಿಂದ ಅಂದರೆ ದೇವರಿಂದ ಬಂದ ಸಾಕ್ಷಿಯಾಗಿರಬೇಕು (ವಚನ 37), ಆದರೆ ಆತನು ತನ್ನ ನಿಯೋಗಿಗಳ ಮೂಲಕ ಅವರಿಗೆ ಸ್ಪಷ್ಟವಾಗಿ ಮಾತನಾಡುವವನಾಗಿದ್ದಾನೆ.

**ಯೋಹಾನನ ಸಾಕ್ಷಿ**

ಯೇಸುವಿನ ಸತ್ಯಸಂಧತೆಯ ಪ್ರತಿಪಾದನೆಯು ಮನುಷ್ಯ ಸಾಕ್ಷಿಯ ಮೇಲೆ ನಿಲ್ಲುವುದಿಲ್ಲ (ವಚನಗಳು 34ಎ, 36), ಆದರೆ ಸಾಕ್ಷಿಗಾಗಿ ಮೊದಲು ಕರೆದದ್ದು ಒಬ್ಬ ಮನುಷ್ಯನನ್ನೇ; ಅದೇ ಸ್ನಾನಿಕನಾದ ಯೋಹಾನನು. ಯೋಹಾನನು ಕರೆಯಲ್ಪಡುವುದಕ್ಕೆ ಕಾರಣ ಆತನು ದೇವರ ವಿಶೇಷ ದೂತನಾಗಿದ್ದನು (ಮಲಾಕಿ 3:1; ಲೂಕ 7:27) ಯಾಕೆಂದರೆ ಮೆಸ್ಸೀಯನಿಗೆ ಸಂಬಂಧಿಸಿದಂತ ಆತನ ಸಾಕ್ಷಿಯು ಎಂದಿಗೂ ಅಲ್ಲಗಳೆಯುವಂತದ್ದಾಗಿರಲಿಲ್ಲ.

"ನೀವು ಯೋಹಾನನ ಬಳಿಯಲ್ಲಿ ಕೇಳಿಕೊಂಡು ಬರುವುದಕ್ಕೆ ಕಳುಹಿಸಿದಿರಿ; ಅವನು ಸತ್ಯಕ್ಕೆ ಸಾಕ್ಷಿ ಹೇಳಿದನು" (ಯೋಹಾನ 5:33) ಎಂದು ಯೇಸು ಹೇಳಿದನು. ಈ ಆಧಾರವು ಯೆರೂಸಲೇಮಿನಿಂದ ಯೋಹಾನನ್ನು ಪ್ರಶ್ನಿಸಲು ಆತನ ಬಳಿಗೆ ನಿಯೋಗವೊಂದನ್ನು ಕಳಿಸಲ್ಪಟ್ಟ ಸಮಯದಲ್ಲಿ ಇದ್ದುದಾಗಿದೆ (ಯೋಹಾನ 1:19-28). ಯೋಹಾನನು ಅವರಿಗೆ "... ನೀವು ಅರಿಯದೆ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ; ಆತನೇ ನನ್ನ

ಹಿಂದೆ ಬರತಕ್ಕವನು; ಆತನ ಕೆರದ ಬಾರನ್ನೂ ಬಿಚ್ಚುವುದಕ್ಕೆ ನಾನು ಯೋಗ್ಯನಲ್ಲ'' (ಯೋಹಾನ 1:26, 27) ಎಂದು ಹೇಳಿದನು. ಮರುದಿನ ಯೋಹಾನನು ಯೇಸುವನ್ನು ಸೂಚಿಸುತ್ತಾ[16] "ಅಗೋ (ಯಜ್ಞಕ್ಕೆ) ದೇವರು ನೇಮಿಸಿದ ಕುರಿ ಲೋಕದ ಪಾಪವನು ನಿವಾರಣೆ ಮಾಡುವನು"; "ನಾನು ಅದನ್ನು ನೋಡಿ ಈತನೇ ದೇವಕುಮಾರನೆಂದು ಸಾಕ್ಷಿ ಕೊಟ್ಟಿದ್ದೇನೆ" ಎಂದು ಹೇಳಿದನು (ವಚನಗಳು 29, 34).

ಜನರನ್ನು ಯೇಸುವಿನೆಡೆಗೆ ನಡೆಸುವ ಒಂದೇ ಒಂದು ಉದ್ದೇಶ ಯೋಹಾನನಿಗೆ ಜೀವಿತದಲ್ಲಿತ್ತು. "ಯೂರೋಪಿನಲ್ಲಿನ ಶ್ರೇಷ್ಟ ಧಾರ್ಮಿಕ ಚಿತ್ರಪಟಗಳಲ್ಲಿ ಒಂದು ಗ್ರುನೆವಾಲ್ಡನ 'ಸ್ನಾನಿಕನಾದ ಯೋಹಾನ'ನ ಚಿತ್ರವಾಗಿದೆ ... ಮನದಲ್ಲಿ ಅಚ್ಚೊತ್ತುವಂತ ಈ ಚಿತ್ರಪಟದ ಅಂಶವೆಂದರೆ ಯೋಹಾನ ತೋರುಬೆರಳು ಯೇಸುವಿನತ್ತ ದೃಷ್ಟಿಸುವಂತೆ ತೋರುವುದರ ಮೇಲೆ ಸೂಚಿಸುವದೇ ಆಗಿದೆ ..."[17]

ಯೋಹಾನನ ಸಾಕ್ಷಿಯನ್ನು ಪರಿಗಣಿಸುತ್ತಾ ಯೇಸುವು "ಯೋಹಾನನು[18] ಉರಿಯುವ ದೀಪದೋಪಾದಿಯಲ್ಲಿ ಪ್ರಕಾಶಿಸಿದನು. ಅವನು ಕೊಡುವ ಬೆಳಕಿನಲ್ಲಿ ಸ್ವಲ್ಪಕಾಲ ವಿನೋದಗೊಳ್ಳುವುದಕ್ಕೆ ಮನಸ್ಸು ಮಾಡಿದಿರಿ" (ಯೋಹಾನ 5:35) ಎಂದು ಹೇಳಿದನು. ಈ ವಾಕ್ಯದ ಮೂಲ ವಾಕ್ಯವು "ಸ್ವಲ್ಪಕಾಲ" ಎಂದಾಗಿದೆ R. C. Foster ರವರು, "ಆ ಸಮಯದವರೆಗೆ ಅಂದರೆ ಆ ಬೆಳಕು ಅವರ ಪಾಪದ ಮೇಲೆ ತಿರುಗುವವರೆಗೂ ಅವರು ಯೋಹಾನನ ಬೆಳಕಿನಲ್ಲಿ ಸಂತೋಷಿಸಿದರು! ಎಂದು ಬರೆಯುತ್ತಾರೆ.[19] ತದನಂತರ ಆತನ ಅವಶ್ಯಕತೆಯು ಅವರಿಗಿರಲಿಲ್ಲ.

ಅವರು ಯೋಹಾನನ ಸಾಕ್ಷಿಯನ್ನು ಅಂಗೀಕರಿಸಿದ್ದಾದರೆ, ಅವರು ಯೇಸುವನ್ನೂ ಕೂಡಾ ಅಂಗೀಕರಿಸಿದವರಾಗಿರುತ್ತಿದ್ದರು. ಆಗ ಅವರು ರಕ್ಷಿಸಲ್ಪಡುತ್ತಿದ್ದರು (ವಚನ 34).

**ಅದ್ಭುತಕಾರ್ಯದ ಸಾಕ್ಷಿ**

ನಂತರ ಕ್ರಿಸ್ತನು ಅದ್ಭುತ ಕಾರ್ಯಗಳ ಬಗೆಗೆ ಮಾತನಾಡಿದ್ದಾನೆ. "ನನಗಂತೂ ಯೋಹಾನನ ಸಾಕ್ಷಿಗಿಂತ ಹೆಚ್ಚಿನ ಸಾಕ್ಷಿ ಉಂಟು; ಹೇಗಂದರೆ ಪೂರೈಸುವುದಕ್ಕೆ ನನ್ನ ತಂದೆಯು ನನಗೆ ಕೊಟ್ಟಿರುವ ಕೆಲಸಗಳು, ಅಂದರೆ ನಾನು ಮಾಡುವ ಕೆಲಸಗಳೇ, ತಂದೆಯು ನನ್ನನ್ನು ಕಳುಹಿಸಿ ಕೊಟ್ಟನೆಂಬುದಾಗಿ ಸಾಕ್ಷಿ ಕೊಡುತ್ತವೆ" (ವಚನ 36). "ಕೆಲಸ" ಎಂಬ ಪದವು ಯೇಸುವಿನ ಸಮಸ್ಥ ಜೀವಿತದ ಬಗೆಗೆ ಮಾತನಾಡುವಾಗ ಬಳಸಲ್ಪಡುತ್ತದೆ; ನಿಶ್ಚಿತವಾಗಿ, ಆತನು ದೇವರ ಮಗನು ಎಂಬುದಕ್ಕೆ ಆತನು ಸಾಕ್ಷಿಕೊಟ್ಟ ಎಲ್ಲಾ ಸತ್ಯಾಂಶಗಳು ಆಗಿವೆ. ಆತನು ಮಾಡಿದ ಎಲ್ಲಾ ಅದ್ಭುತ ಕಾರ್ಯಗಳು ದೇವರ ಶಕ್ತಿಯಿಂದ ಆದವುಗಳು ಎಂದು ಯೇಸುವಿನ ಮನದಲ್ಲಿ ಇತ್ತು.[20]

ಯೇಸು ಯೆರೂಸಲೇಮಿನ ತನ್ನ ಹಿಂದಿನ ಪ್ರಯಾಣದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದ್ದನು (ಯೋಹಾನ 2:23). ಆ ಅದ್ಭುತ ಕಾರ್ಯಗಳನ್ನು ಗಮನಿಸುತ್ತಾ ನಿಕೋದೇಮನು "... ನೀನು ದೇವರ ಕಡೆಯಿಂದ ಬಂದ ಬೋಧಕನೆಂದು ಬಲ್ಲೆನು; ... ದೇವರ ಸಹಾಯವಿಲ್ಲದೆ ಮಾಡುವದು ಯಾರಿಂದಲೂ ಆಗದು" (ಯೋಹಾನ 3:2) ಎಂದು ಹೇಳಿದನು. ಈ ಪ್ರಸ್ತುತ ಯೆರೂಸಲೇಮಿನ ಪ್ರಯಾಣದಲ್ಲಿ ಯೇಸು ಕಡೇಪಕ್ಷ ಒಂದಾದರೂ ಸೂಚಕ ಕಾರ್ಯಗಳನ್ನು ಮಾಡಿದ್ದನು. ಈ ಮಾತುಗಳನ್ನು ಅವನು ಮಾತನಾಡುವಾಗ ಕೊಳದ ಬಳಿಯಲ್ಲಿ ಸ್ವಸ್ಥನಾದವನು ಅಲ್ಲಿಯೇ ಹತ್ತಿರದಲ್ಲೇ ನಿಂತಿರಬಹುದು.

ಯೇಸುವಿನ ವಿಮರ್ಶಕರು ಆತನು ಸೂಚಕಕಾರ್ಯಗಳನ್ನು ಮಾಡಿದ್ದನ್ನು ನಿರಾಕರಿಸುವಂತಿರಲ್ಲಿ,[21] ಆದರೆ ಅವರು ಇನ್ನೂ ಆತನನ್ನು ಮೆಸ್ಸೀಯ ಎಂದು ಒಪ್ಪಿಕೊಳ್ಳುವುದನ್ನು ನಿರಾಕರಿಸುತ್ತಲೇ ಇದ್ದರು.

**ವೇದಭಾಗಗಳ ಸಾಕ್ಷಿ**

ಯೇಸು ದೇವರಿಂದ ಬಂದ ದೂತನನ್ನೂ ಮತ್ತು ದೇವರಿಂದ ಆದ ಸೂಚಕಕಾರ್ಯಗಳನ್ನು ಸಾಕ್ಷಿಗಳೆಂದು ಕರೆದನು. "ಶಾಸ್ತ್ರಗಳಿಂದ ನಿತ್ಯಜೀವವು ದೊರೆಯುತ್ತದೆಂದು[22] ನೀವು ನೆನಿಸಿ ಅವುಗಳನ್ನು ವಿಚಾರಿಸುತ್ತೀರಲ್ಲಾ; ಅವುಗಳು ನನ್ನ ವಿಷಯದಲ್ಲಿ ಸಾಕ್ಷಿಕೊಡುವವುಗಳು ಆಗಿವೆ" (ಯೋಹಾನ 5:39) ಎಂದು ದೇವವಾಕ್ಯ ವನ್ನು ಸಾಕ್ಷಿಗಾಗಿ ಆತನು ಇಲ್ಲಿ ಉಪಯೋಗಿಸುತ್ತಿದ್ದಾನೆ. ಹಳೆಯ ಒಡಂಬಡಿಕೆಯಲ್ಲಿ ನೂರಾರು ಪರಿಚ್ಛೆದಗಳು ಕ್ರಿಸ್ತನೆಡೆಗೆ ಸೂಚಿಸುವವುಗಳು ಆಗಿವೆ (ಕೀರ್ತನೆ 2; 22; ಯೆಶಾಯ 53). ನಂತರ ಯೇಸು ಮಾತನಾಡುತ್ತಾ "ನನ್ನ ವಿಷಯವಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿಯೂ ಪ್ರವಾದಿಗಳ ಗ್ರಂಥಗಳಲ್ಲಿಯೂ ಕೀರ್ತನೆಗಳಲ್ಲಿಯೂ ಬರೆದಿರುವುದೆಲ್ಲಾ ನೆರವೇರುವದು ಅಗತ್ಯವೆಂದು ನಿಮಗೆ ಹೇಳಲಿಲ್ಲವೇ" ಅಂದನು (ಲೂಕ 24:44).

ಅವರದೇ ಮಾರ್ಗದಲ್ಲಿ, ಯೆಹೂದಿ ನಾಯಕರು ವೇದವಾಕ್ಯಗಳಿಗೆ ತಮ್ಮನ್ನು ಸಮರ್ಪಿಸಿಕೊಂಡವರಾಗಿದ್ದರು. ರಬ್ಬೂನಿಗಳ ಬರಹವು "ಧರ್ಮಶಾಸ್ತ್ರದ ವಾಕ್ಯಗಳನ್ನು ಯಾರು ಗೆಲ್ಲುತ್ತಾರೋ ಅವರು ತಮ್ಮಷ್ಟಕ್ಕೆ ತಾವೇ ಜಗತ್ತಿನಲ್ಲಿರುವ ಜೀವಿತವನ್ನು ಗೆಲ್ಲಬಲ್ಲರು"[23] ಎಂದಾಗಿತ್ತು, ಈ ಕಾರಣಕ್ಕಾಗಿ ಅವರು ಶಾಸ್ತ್ರಗಳನ್ನು ಮೆಲಕುಹಾ ಕುವವರಾಗಿದ್ದರು. ಅವರು ಪದಗಳನ್ನು ಲೆಕ್ಕಹಾಕುತ್ತಿದ್ದರು; ಅವರು ಅಕ್ಷರಗಳನ್ನು ಲೆಕ್ಕಹಾಕುತ್ತಿದ್ದರು. ಅವರು ತಮ್ಮ ತಾತ್ವಿಕ ಸೂಕ್ಷ್ಮದರ್ಶಕದಡಿಯಲ್ಲಿ ಪ್ರತಿಯೊಂದು "ಲೇಶವನ್ನೂ" ಮತ್ತು "ಶಿರ್ಷಿಕೆಯನ್ನು" ಇಡುತ್ತಿದ್ದರು[24] (ಮತ್ತಾಯ 5:18; KJV). ಆದರೂ ಜನರನ್ನು ಕ್ರಿಸ್ತನೆಡೆಗೆ ತರಲು ಯೋಚಿಸಿದಂತಹ ವೇದಭಾಗದ ಉದ್ದೇಶವನ್ನು ಅವರು ತಪ್ಪಿದವರಾಗಿದ್ದರು (ಗಲಾತ್ಯ 3:24).

ಅವರು ಪ್ರಯಾಣಿಸುವ ದೂರವನ್ನು ಸೂಚಿಸುವ ಬದಲು, ನಿಲ್ದಾಣದಲ್ಲಿ ಲಕ್ಷಪೂರ್ವಕವಾಗಿ ಪರೀಕ್ಷೆಮಾಡುವ, ಅದನ್ನು ಅಳತೆ ಮಾಡುವ, ಅದರ ಚಿತ್ರವನ್ನು ಬರೆಯುವ, ಅದರ ವಿವರಣೆಯನ್ನು ಬರೆಯುವ ಜನರ ಹಾಗೆ ಇದ್ದಾರೆ. ಯೆಹೂದಿಗಳು "ದೇವರ ವಾಕ್ಯವನ್ನು ತಿಳಿದವರಾಗಿದ್ದರು, ಆದರೆ ಅವರು ವಾಕ್ಯದ ದೇವರನ್ನು ತಿಳಿದಿರಲಿಲ್ಲ" ಎಂದು Warren Wiersbe ಬರೆಯುತ್ತಾರೆ![25] ವಾಕ್ಯವು ಅವರ ತಲೆಯಲ್ಲಿ ಇದೆ ಆದರೆ ಅವರ ಹೃದಯದಲ್ಲಿಲ್ಲ ಎಂದು ಯೇಸು ತಿಳಿದುಕೊಂಡಿದ್ದನು. ಆತನು ಅವರಿಗೆ "... ಆತನ ವಾಕ್ಯವೂ ನಿಮ್ಮಲ್ಲಿ ನೆಲೆಗೊಂಡಿದ್ದೂ ಇಲ್ಲ" ಎಂದು ಹೇಳುತ್ತಾನೆ (ವಚನ 38).

ಯೇಸು ಮೋಶೆಯ ಬರಹವನ್ನು ಸೂಚಿಸುತ್ತಾ ಆತನ ಬಗೆಗೆ ಇರುವ ಸಾಕ್ಷಿಯ ವೇದಭಾಗದ ಸತ್ಯಾಂಶದ ಗಮನಾರ್ಹವಾದ ಹೇಳಿಕೆಯನ್ನು ಕೊಡುತ್ತಾನೆ:

> ನಾನು ತಂದೆಯ ಮುಂದೆ ತಪ್ಪುಹೊರಿಸುವೆನೆಂದು ನೆನಸಬೇಡಿರಿ; ನೀವು ಆಶ್ರಯಿಸಿಕೊಂಡಿರುವ ಮೋಶೆಯೇ ನಿಮ್ಮ ಮೇಲೆ ತಪ್ಪುಹೊರಿಸುವನು. ಅವನು ನನ್ನ ವಿಷಯವಾಗಿ ಬರೆದನು; ಆದುದರಿಂದ ನೀವು ಆತನ ಮಾತನ್ನು ನಂಬುವವರಾಗಿದ್ದರೆ ನನ್ನ ಮಾತನ್ನು ನಂಬುತ್ತಿದ್ದೀರಿ. ಅವನು ಬರೆದ ಮಾತುಗಳನ್ನು[26] ನೀವು ನಂಬದಿದ್ದರೆ ನಾನು ಹೇಳುವ ಮಾತುಗಳನ್ನು ಹೇಗೆ ನಂಬುವಿರಿ? (ಯೋಹಾನ 5:45-47).

"ಜನಾಂಗವು" ಬರುವುದಾಗಿ ಮೋಶೆಯು ಬರೆದನು (ಆದಿಕಾಂಡ 3:15; 22:18; ನೋಡಿರಿ ಗಲಾತ್ಯ 3:16). ಈ ವಾಗ್ದತ್ತನು ಯೂದಾಯ ಕುಲದಿಂದ ಬರುವವನಾಗಿದ್ದಾನೆ ಎಂದು ಆತನು ಪ್ರವಾದಿಸಿದನು (ಆದಿಕಾಂಡ 49:10). ತನ್ನಷ್ಟಕ್ಕೆ ತಾನೇ ಏಳುವ ಪ್ರವಾದಿಯ ಬಗೆಗೆ ಆತನು ಮಾತನಾಡಿದ್ದಾನೆ (ಧರ್ಮೋಪದೇಶಕಾಂಡ 18:15-18). ಆತನ ಎಲ್ಲಾ ಬರಹಗಳು ಮೆಸ್ಸೀಯನ ಬರೋಣದ ಪರವಾಗಿ ಮತ್ತು ವಿರೋಧವಾಗಿರುವವುಗಳಿಂದ ತುಂಬಿವೆ.[27] ಆದ್ದರಿಂದ, ಯೇಸು ತನಗೋಸ್ಕರ ಮೋಶೆಯು ಮಾತ್ರ ಸಾಕ್ಷಿಯಲ್ಲ ಆದರೆ ಕೊನೆಯಲ್ಲಿ ಆತನು ತನ್ನನ್ನು ತಿರಸ್ಕರಿಸಿದವರ ವಿರುದ್ಧವಾಗಿ ನಿಂತುಕೊಳ್ಳುವನು.

"ಮೋಶೆಯೇ ನಿಮ್ಮ ಮೇಲೆ ತಪ್ಪುಹೊರಿಸುವನು" ಎಂದು ಆತನು ಘೋಷಿಸುವವನಾಗಿದ್ದಾನೆ (ಯೋಹಾನ 5:45).

ಅವರು ಹೊರಹಾಕಿದ ಪುರಾವೆಗಳ ಸಮೂಹಗಳೊಂದಿಗೆ, ಯೆಹೂದಿ ನಾಯಕರು ಯೇಸುವನ್ನು ಯಾಕೆ ನಿರಾಕರಿಸಿದರು? ಆ ಸಮಸ್ಯೆಯು ಒಬ್ಬನ ಚಿತ್ತ ಮತ್ತು ಹೃದಯದ್ದಾಗಿತ್ತು ಎಂದು ಯೇಸು ಹೇಳಿದನು. "ಮನುಷ್ಯರ ಅಂತರ್ಯವನ್ನು ತಿಳಿದಾತ"ನು ಈ ಆರೋಪವನ್ನು ಕೊಡುವವನಾಗಿದ್ದಾನೆ (ಯೋಹಾನ 2:25). "... ನನ್ನ ಬಳಿಗೆ ಬರುವುದಕ್ಕೆ ನಿಮಗೆ *ಮನಸ್ಸಿಲ್ಲ* ... ದೇವರಲ್ಲಿ ನಿಮಗೆ *ಪ್ರೀತಿಯಿಲ್ಲವೆಂದು* ನನಗೆ ತಿಳಿದಿದೆ" (5:40-42; ಒತ್ತಿ ಹೇಳಿದ್ದು ನನ್ನದು). ಇಲ್ಲಿನ ಸಮಸ್ಯೆ ಎಂದರೆ ಅವರು "ಒಬ್ಬನೇ ದೇವರಿಂದ ಬರುವ ಮಾನವನ್ನು ಅಪೇಕ್ಷಿಸುವ ಬದಲಾಗಿ ಮನುಷ್ಯನಿಂದ ಬರುವ ಮಾನವನ್ನು ಎದುರುನೋಡುವವರಾಗಿದ್ದರು ಎಂಬುದೇ ಆಗಿತ್ತು" (ವಚನ 44). ಒಬ್ಬನು ಮೆಸ್ಸೀಯನಾಗಿರುವುದಾಗಿ ಪ್ರತಿಪಾದಿಸಿ, ಮೆಸ್ಸೀಯನ ಗುಣಗಳನ್ನು ಹೊಂದಿಕೊಳ್ಳದೇ ಇದ್ದರೂ ಅವರನ್ನು ಹೊಗಳುತ್ತಾ ಅವರ ಕಾರ್ಯಸೂಚಿಗೆ ಪೂರಕವಾಗಿದ್ದರೆ ಅವನನ್ನು ಮೆಸ್ಸೀಯನೆಂದು ಸ್ವೀಕರಿಸುವರು ಎಂದು ಯೇಸು ಯೆಹೂದಿ ನಾಯಕರಗಳಿಗೆ ಹೇಳಿದನು (ವಚನ 43). ಇದಕ್ಕೆ ವ್ಯತರಿಕ್ತವಾಗಿ, ಪರಲೋಕದ ಸಮ್ಮತಿಯಿಂದ ಬಂದ ಯೇಸುವನ್ನು ಯೆಹೂದಿಗಳು ಸ್ವೀಕರಿಸುವುದಕ್ಕೆ ನಿರಾಕರಿಸಿದರು (ವಚನ 43) ಕಾರಣ ಅವರು ಯೋಚಿಸಿದಂತೆ ಅವರಿಗೆ ಅರ್ಹವಾದ ಮಹಿಮೆಯನ್ನು ಆತನು ಅವರಿಗೆ ಕೊಡಲು ನಿರಾಕರಿಸಿದ್ದೇ ಆಗಿತ್ತು.[28]

ಯೆರೂಸಲೇಮಿನಲ್ಲಿರುವ ಈ ಧಾರ್ಮಿಕ ಅಧಿಕಾರಿಗಳ ಸ್ಥಿತಿಯನ್ನು ವಿವರಿಸುವುದಾದರೆ ಅವಶ್ಯವಲ್ಲದ ಸಂಗತಿಗಳ ಬಗೆಗೆ ಅವು ನಿಜವಲ್ಲವೆಂದು ಅವರು ಬಹುವಾಗಿ ತಿಳಿದರೂ ಆಸತ್ಯವನ್ನು ಅರಿಯುವಲ್ಲಿ ಅವರು ಮೂಕರೂ, ಕಿವುಡರೂ ಮತ್ತು ಕುರುಡ ರಾಗಿದ್ದರು[29] (ನೋಡಿರಿ ಮತ್ತಾಯ 13:15).

ಬೈಬಲ್ ಒಬ್ಬ ಒಳ್ಳೆಯ ವಿದ್ಯಾರ್ಥಿಯಾಗಿದ್ದುಕೊಂಡು ಸತ್ಯದ ರಕ್ಷಣೆಯ ಜ್ಞಾನವನ್ನು ಹೊಂದದೇ ಇರುವುದಕ್ಕೆ ಸಾಧ್ಯತೆ ಇರಬಹುದಲ್ಲವೇ? ದೇವವಾಕ್ಯವನ್ನು ಒಳ್ಳೆಯ ರೀತಿಯಲ್ಲಿ ("ಸತ್ಯದ ಪ್ರೀತಿ"; 2 ಥೆಸಲೋನಿಕ 2:10) ಮತ್ತು ಒಳ್ಳೆಯ ಉದ್ದೇಶ ದೊಂದಿಗೆ ಯೋಚಿಸುವಂತೆ ("ಕರ್ತನನ್ನು ಅರಿಯಲು"; ಇಬ್ರಿಯ 8:11) ದೇವರು ನಮಗೆ ಯಾವಾಗಲೂ ಸಹಾಯಮಾಡಲಿ.

## ಮುಕ್ತಾಯ[30]

ಸಬ್ಬತ್ತನ್ನು ಮುರಿದಿದ್ದಕ್ಕಾಗಿ ತಾವು ತಪ್ಪು ಹೊರಿಸಿದ್ದಕ್ಕಾಗಿ ಯೇಸು ಭಯಬೀಳುವನು ಎಂದು ಬಹುಶಃ ಯೆಹೂದ್ಯರು ಅಪೇಕ್ಷಿರಬಹುದು, ಆದರೆ ಆತನು ಹಾಗಾಗಲಿಲ್ಲ. ಬದಲಾಗಿ ಆತನು ಅವರ ಸವಾಲುಗಳನ್ನು ಎದುರಿಸಿದನು ಮತ್ತು ಕೆಲ ಮೂಲತತ್ವದ ಪ್ರತಿವಾದಗಳನ್ನು ಮಾಡಿದನು. ಆತನ ವಾದಗಳು ತಪ್ಪೆಂದು ಸಾಬೀತುಮಾಡಲು ಯೆಹೂದ್ಯರು ಅಸಮರ್ಥರಾದರು, ಅವರು ಆತನು ದೇವರ ಮಗನೆಂದು ಒಪ್ಪಿಕೊಳ್ಳ ಲೇಬೇಕಾಯಿತು - ಆದರೆ ದುರದೃಷ್ಟವಶಾತ್ ಹಾಗೆ ಮಾಡುವುದಕ್ಕೆ ಒಪ್ಪಿಕೊಳ್ಳದೇ ಹೋದರು.

ನಮ್ಮ ಬಗೆಗೆ ಏನು? ಯೋಹಾನ 5 ಕೇವಲ ಒಂದನೇ ಶತಮಾನದ ಯೆಹೂದಿಗಳ ಕಠಿಣ ಹೃದಯವನ್ನು ಬಯಲು ಮಾಡುವುದಕ್ಕಾಗಿ ಬರೆಯಲ್ಪಟ್ಟಿಲ್ಲ. ಬದಲಾಗಿ ಇಪ್ಪತ್ತೊಂದನೆಯ ಶತಮಾನದ ನಮ್ಮ ಹೃದಯವನ್ನು ತೆರೆಯುವುದಕ್ಕಾಗಿ ಬರೆಯಲ್ಪಟ್ಟಿದೆ[31] ಯೇಸುವಿನ ಪ್ರತಿಪಾದನೆಯನ್ನು ಯಾರೂ ಕೂಡಾ ಅಲ್ಲಗಳೆ ಯಲಾರರು. ಆ ಪ್ರತಿಪಾದನೆಗಳ ಬಗೆಗೆ C. S. Lewisರವರು ಹೀಗೆ ಬರೆಯುತ್ತಾರೆ,

> ಯೇಸು ಕ್ರಿಸ್ತನಲ್ಲದೇ ಯಾವ ವ್ಯಕ್ತಿಯಿಂದಲೂ ಈ ಮಾತುಗಳು ಹೊರಹೊಮ್ಮಿದ್ದಲ್ಲಿ ಆ ಮಾತುಗಳು ಅಸಮಂಜಸ ಹಾಗೂ ಅಸಮ್ಮತ ಎನ್ನಿಸುವವು,

… ನೀನು ಈ ಮುಂದಿನವುಗಳಲ್ಲಿ ಒಂದನ್ನು ಆಯ್ಕೆಯನ್ನು ಮಾಡಿಕೊಳ್ಳಬೇಕು; ಈ ಮನುಷ್ಯನು ದೇವರ ಮಗನು ಆಗಿದ್ದಾನೋ ಇಲ್ಲವೋ; ಅಥವಾ ಹುಚ್ಚನೋ ಅಥವಾ ಅದಕ್ಕಿಂತ ಕೀಳಾಗಿದ್ದಾನೋ. ನೀನು ಆತನ ಮೂರ್ಖತನಕ್ಕಾಗಿ ಆತನನ್ನು ಸುಮ್ಮನಿರಸಬಹುದು, ನೀನು ಆತನನ್ನು ದೆವ್ವದಂತೆ ಆತನಿಗೆ ಉಗುಳಬಹುದು ಅಥವಾ ಕೊಲ್ಲಬಹುದು; ಅಥವಾ ಆತನ ಪಾದಗಳಿಗೆ ಅಡ್ಡ ಬೀಳಬಹುದು ಮತ್ತು ಆತನನ್ನು ಕರ್ತನು ಮತ್ತು ದೇವರು ಎಂದು ಕರೆಯ ಬಹುದು.[32]

ಯೇಸು ಯೋಹಾನ 5ರಲ್ಲಿ ವಿಚಾರಣೆಯ ಮೇಲೆ ಇದ್ದಾನೆ, ಮತ್ತು ಆತನು ಮಾನವ ಹೃದಯದಲ್ಲಿಯೂ ಕೂಡಾ ಇನ್ನೂ ವಿಚಾರಣೆಯಲ್ಲಿಯೇ ಇದ್ದಾನೆ. ಇಂದು ನೀನು ನ್ಯಾಯಾಧೀಶನಾಗಿದ್ದೀ. ನಿನ್ನ ತೀರ್ಪು ಏನು? ಯೇಸು ಸತ್ಯವನ್ನು ಮಾತನಾಡುತ್ತಿದ್ದಾನೆಯೇ? ಆತನು ಪ್ರತಿಪಾದಿಸಿದಂತೆ ನಿಜವಾಗಿಯೂ ಇದ್ದಾನೆಯೇ? ನಿನ್ನ ಉತ್ತರ "ಹೌದು" ಎಂದಾದರಲ್ಲಿ ಈ ಸಮಾರೋಪವು ನಿನ್ನ ಜೀವಿತದಲ್ಲಿ ಯಾವ ವ್ಯತ್ಯಾಸವನ್ನು ಮಾಡುವುದಾಗಿದೆ? ಈ ಪಾಠವನ್ನು ಸಾಧ್ಯವಾದಷ್ಟು ಪ್ರಾಯೋಗಿತ ಮಾಡಿಕೋ. ನಿನ್ನ ಜೀವಿತದಲ್ಲಿ ಯಾವ ವ್ಯತ್ಯಾಸವನ್ನು ಮಾಡುವದು ಎಂಬುದನ್ನು ಕೇಳಿಕೋ. ಸಾಧ್ಯವಾದಷ್ಟು ನಿರ್ಧಿಷ್ಟವಾಗಿರು. ಇದು ಯೇಸುವಿನ ಮಹತ್ವದ ಒಪ್ಪಿ ಕೊಳ್ಳುವಿಕೆಗಾಗಿ ಮಹತ್ವದ ಪ್ರತಿಪಾದನೆಯ ಕರೆಯಾಗಿದೆ.[33]

---

ಟಿಪ್ಪಣಿಗಳು

[1]ಸ್ವಸ್ಥತೆಯ ಕಥೆಯನ್ನು ನೀನು ವಿಸ್ತರಿಸಬೇಕಾದರೆ ಮತ್ತು ಅದಕ್ಕೆ ಸೇರಿಸಬೇಕಾದ್ದಾದರೆ ಸಬ್ಬತ್ತು ಮತ್ತು ಸಂಪ್ರದಾಯಸ್ತರಾದ ಜನರ ಬಗೆಗಿನ ವಿವರಗಳನ್ನು ಸೇರಿಸು. [2]ಈ ಅಪವಾದವು ಯೋಹಾನ 5:16, 18ರಲ್ಲಿನ ಸೂಚಿತವಾಗಿದೆ. [3]ಆದಿಕಾಂಡ 2:2ನ್ನು ಓದಿರಿ. [4]ಇಬ್ರಿಯ 1:3ರಲ್ಲಿ ದೇವರ ಪ್ರಭಾವದ ಪ್ರಕಾಶವೂ ಮತ್ತು ಆತನ ತತ್ವದ ಮೂರ್ತಿಯ ಬಗೆಗೆ ಮಾತನಾಡಿದ ಮಾತುಗಳನ್ನು ಓದಿರಿ. [5]ಮತ್ತಾಯ 5:45ನ್ನು ಓದಿರಿ. [6]ಆದಿಕಾಂಡ 18:25; ಧರ್ಮೋಪದೇಶಕಾಂಡ 32:39ನ್ನು ಓದಿರಿ. [7]ಈ ವಚನವು ದೋಷಯುಕ್ತವಾಗಿ ಕೆಲವೊಮ್ಮೆ ಆತ್ಮೀಕ ಜೀವಿತವನ್ನು ಹೊಂದಲು "ನಂಬಿಕೆ ಮಾತ್ರ" ಎಲ್ಲವು ಆಗಿದೆ ಎಂದು ಬಳಸಲ್ಪಡುತ್ತದೆ. ಇಲ್ಲಿ "ವಿಶ್ವಾಸ" ಎಂಬುದು ಪೂರ್ಣಾರ್ಥದಲ್ಲಿ ವಿಧೇಯತೆಯುಳ್ಳ ನಂಬಿಕೆಯನ್ನು ಹೊಂದಿರುವದು ಎಂದಾಗಿದೆ (ಮತ್ತಾಯ 7:21; ಮಾರ್ಕ 16:16). [8]ಈ ವಚನವು ಕೆಲಸಾರಿ ಒಬ್ಬನು ಒಂದು ಸಾರಿ ಹೊಂದುವ ಆತ್ಮೀಕ ಜೀವಿತ ವನ್ನು (ರಕ್ಷಿಸಲ್ಪಡುವ) ಆತನು ಕಳೆದು ಹೋದನು ಎಂದು ಸೂಚಿಸಲು ದೋಷಯುಕ್ತವಾಗಿ ಬಳಸಲ್ಪಡುತ್ತದೆ. "ಇಲ್ಲದೆ ಹೋದರೆ" ಕೆಲವರು "ಇದು ನಿತ್ಯ ಜೀವವಾಗದು" ಎಂದು ಹೇಳುವುದಾಗಿದೆ. ಅವಿಶ್ವಾಸದ ಮೂಲಕ ದೇವರ ಮಗುವು ನಿತ್ಯ ದಂಡನೆಗೆ ಒಳಗಾಗುವನು ಎಂದು ಸತ್ಯವೇದವು ಸ್ಪಷ್ಟವಾಗಿ ಹೇಳುತ್ತದೆ (1 ಕೊರಿಂಥ 10:12; ಯಾಕೋಬ 5:19, 20; 2 ಪೇತ್ರ 2:20-22). ಒಂದು ಸಾರಿ ನಾನು ಜೀವನ ಪೂರ್ತಿಯ ಖಚಿತತೆಯು ಇತ್ತು ಒಂದು ಮಸಿ ಪೆನ್ನನ್ನು ಕೊಂಡೆನು. ಆದರೆ ನಾನು ಅದನ್ನು ಕಳೆದುಕೊಂಡೆನು ಇಲ್ಲಿನ ಸತ್ಯಾಂಶವೆಂದರೆ ಆ ಪೆನ್ನಿಗೆ ಜೀವಪೂರ್ತಿಯ ಖಚಿತತೆಯು ಇತ್ತು. ಆದರೆ ನಾನು ಅದನ್ನು ಜೀವನ ಪೂರ್ತಿ (ಕಳೆದು ಕೊಳ್ಳದೆ) ಇಟ್ಟುಕಾಂಡಿರಬೇಕೆನ್ನುವುದಕ್ಕೆ ಇರಲಿಲ್ಲ. [9]ಈ ಪರಿಚ್ಛೇದವು ಕೆಲಸಾರಿ ಕ್ರೈಸ್ತರು ಕರ್ತನ ನ್ಯಾಯಾಸನದ ಮುಂದೆ ನಿಲ್ಲಲಾರರು ಎಂದು ದೋಷಯುಕ್ತವಾಗಿ ಬಳಿಸಲು ಉಪಯೋಗಿಸಲ್ಪಟ್ಟಿದೆ, ಆದರೆ ಪೌಲನು ಕೆಟ್ಟದಕ್ಕಾಗಲೀ ಒಳ್ಳೆಯದಕ್ಕಾಗಲಿ (ರೋಮಾಪುರ 2:5-8; 14:10; 2 ಕೊರಿಂಥ 5:10) "ನಾವೆಲ್ಲರೂ ದೇವರ ನ್ಯಾಯಾಸನದ ಮುಂದೆ ನಿಲ್ಲಬೇಕು" ಎಂದು ಹೇಳುತ್ತಾನೆ (ರೋಮಾಪುರ 14:10). [10]ಒಂದು ಸಂಪ್ರದಾಯಿಕ ಹೇಳಿಕೆಯ ಪ್ರಕಾರ ಯೇಸು ಇನ್ನೂವರೆಗೂ ಯಾರೋಬ್ಬ ಸತ್ತವರನ್ನು ಎಬ್ಬಿಸಿಲ್ಲ.

[11]ಒಳ್ಳೆಯ ಕಾರ್ಯಗಳನ್ನು ಮಾಡುವುದರ ಬಗೆಗಿನ ಹೇಳಿಕೆಯು ಮತ್ತು ಕೆಟ್ಟಕಾರ್ಯ ಗಳನ್ನು, ಮಾಡುವದು ಇವುಗಳನ್ನು ನಾವು ಮಾಡುವುದಿಂದ ರಕ್ಷಣೆಯನ್ನು ಸಂಪಾದಿಸುವೆವು ಅಥವಾ ಗಳಿಸುವೆವು ಎಂದು ಹೇಳಿದರು. ಹೇಗೋ ದೇವರು ವಿಧೇಯತೆಯ ನಂಬಿಕೆಯನ್ನು ಶ್ಲಾಘೀಸು ವವನಾಗಿರುತ್ತಾನೆ ಎಂಬುದಕ್ಕೆ ಇದು ಸಾಕ್ಷಿಯಾಗಿರುವದು (ನೋಡಿರಿ ಇಬ್ರಿಯ 5:8, 9; ಯಾಕೋಬ 2:14-26). [12]ದೇವರು ಜಗತ್ತಿಗೆ ನ್ಯಾಯವನ್ನು ನಿರ್ವಹಿಸುವನು, ಆದರೆ ಆತನು "ತನ್ನ ಮಗನ"

ಮೂಲಕ ನ್ಯಾಯತೀರ್ಪಿಕೆಯನ್ನು ಮಾಡುವನು (ನೋಡಿರಿ ಅಪೊಸ್ತಲರ ಕೃತ್ಯಗಳು 17:31; ರೋಮಾಪುರ 2:16). [13]ನನ್ನ ಪ್ರಕಾರ, ಆತನು (ಪುರಾವೆಗಳನ್ನು ಕೊಡುವುದರ ಮೂಲಕ) ಎತ್ತಿ ಹಿಡಿದನು ಅಥವಾ ಬಾಯಿಮುಚ್ಚಿದನು (ಪ್ರತಿವಾದವನ್ನು ಮಾಡುವುದನ್ನು ನಿಲ್ಲಿಸಿದನು) ಎಂದು ನಾವು ಹೇಳ ಬಹುದಾಗಿದೆ. [14]"ಸಾಕ್ಷಿಯು" ಯೋಹಾನನ ಮೂಲ ಪದವಾಗಿದೆ. "ಸಾಕ್ಷಿ"ಯ ಗ್ರೀಕ ಪದಕ್ಕೊಸ್ಕರ ವಿವಿಧ ರೀತಿಗಳು ಹೆಚ್ಚು ಕಡಿಮೆ ಐವತ್ತು ಸಾರಿ ಈ ಪುಸ್ತಕದಲ್ಲಿ ಇವೆ. NASBಯ ಹಿಂದಿನ ಸಂಚಿಕೆಗಳು ಭಾಷಾಂತರಕಾರರು "ಸಾಕ್ಷಿಹೇಳು" ಮತ್ತು "ಪ್ರಮಾಣ" ಈ ವಿಧಗಳನ್ನು ಸೂಚಿಸುವಾಗ "ಸಾಕ್ಷಿಯು" ಪದವನ್ನು ಎರವಲು ಪಡೆದಿದ್ದಾರೆ. [15]ಯೋಹಾನ 5:32, 33ರ ಸಾಮಾನ್ಯ ಓದುವಿಕೆಯು ವಚನ 32ರ ಸಾಕ್ಷಿಯು ಸ್ನಾನಿಕನಾದ ಯೋಹಾನನೇ ಎಂಬುದರ ಮೇಲೆ ಪ್ರಭಾವವನ್ನು ಬೀರುವುದಾಗಿದೆ (ವಚನ 33), ಆದರೆ ಯೇಸು ಇನ್ನೂ ಮುಂದೆ ಹೋಗಿ ತಾನು ಸೂಚಿಸುವ ಸಾಕ್ಷಿಯು "ಮನುಷ್ಯರಿಂದಲ್ಲ" (ವಚನ 34) ಮತ್ತು "ಯೋಹಾನನ ಸಾಕ್ಷಿಗಿಂತಲೂ ಹೆಚ್ಚಿನ ಸಾಕ್ಷಿ" (ವಚನ 36) ಎಂದು ಹೇಳುತ್ತಾನೆ. ವಚನ 32ರಲ್ಲಿನ (ಇಂಗ್ಲೀಷ್‌ನಲ್ಲಿ) "H" ಅಕ್ಷರದ ದೊಡ್ಡಕ್ಷರವನ್ನು ಗಮನಿಸಿರಿ, NASBಯ ಭಾಷಾಂತರಕಾರರು ಇದನ್ನು ದೇವರು ಎಂದು ಸೂಚಿಸುವವರಾಗಿದ್ದಾರೆ. [16]ಸೂಚಿವಾದ ಕಾರ್ಯವು "ಇಗೋ" ಎಂಬ ಪದದಲ್ಲಿ ಸೂಚಿತವಾಗಿದೆ. [17]Bruce Milne, *The Message of John* (Downers Grove, Ill.: Inter-Varsity Press, 1993), 98. [18]ಯೇಸು ಭೂತಕಾಲವನ್ನು ಉಪಯೋಗಿಸಿದ್ದರ ಕಾರಣ ಯೋಹಾನನು ಈಗಾಗಲೇ ಸೆರೆ ಮನೆವಾಸವನ್ನು ಅನುಭವಿಸಿದ್ದನು (ಮತ್ತಾಯ 4:12). [19]R. C. Foster, *Studies in the Life of Christ* (Grand Rapids, Mich.: Baker Book House, 1971), 451. [20]"ಕಾರ್ಯಗಳು" ಯೋಹಾನನ ಪುಸ್ತಕದಲ್ಲಿ ತನ್ನ ಸೂಚಕಕಾರ್ಯಗಳ ಬಗೆಗೆ ಸೂಚಿಸುತ್ತಾ ಯೇಸು ಸಾಮಾನ್ಯವಾಗಿ ಇದನ್ನು ಉಪಯೋಗಿಸಿದ್ದಾನೆ (ನೋಡಿರಿ 7:3; 10:25, 32, 37, 38; 14:10, 11; 15:24).

[21]ನಂತರ ಯೇಸು ದೆವ್ವಗಳ ಸಹಾಯದಿಂದ ಅದ್ಭುತಕಾರ್ಯಗಳನ್ನು ಮಾಡುತ್ತಾನೆ ಎಂದು ಆರೋಪಿಸಿದರು (ಮತ್ತಾಯ 12:24). ಆದರೆ ಆತನು ಅದ್ಭುತ ಕಾರ್ಯಗಳನ್ನು ಮಾಡಿದ್ದನ್ನು ಅವರು ಅಲ್ಲಗಳೆಯಲಿಲ್ಲ. [22]ಗ್ರೀಕ್‌ದಲ್ಲಿ, ಈ ವಾಕ್ಯದ ಮೊದಲ ಕ್ರಿಯಾಪದವು ("ಹುಡುಕು") NASBಯಲ್ಲಿ ಸೂಚಿತವಾದಂಥಹ ಸೂಚಕಾರ್ಥವಾಗಿರಬಹುದು (ಸತ್ಯಾಂಶ) ಅಥವಾ KJVಯಲ್ಲಿ ಸೂಚಿತ ವಾದಂಥ ಅತ್ಯಗತ್ಯವಾದದ್ದಾಗಿರಬಹುದು (ಒಂದು ಆಜ್ಞೆ). ಈ ಸಂದರ್ಭದಲ್ಲಿ ಸೂಚಿತವಾಗುವಂಥದ್ದು ಒಳ್ಳೆಯ ಕೆಲಸಮಾಡುವ ಹಾಗೆ ತೋರುತ್ತದೆ. ಅವರು ವೇದಭಾಗದಲ್ಲಿ ಹುಡುಕಿದಾಗ ಯೇಸು ಅದರಲ್ಲಿರುವುದನ್ನು ಕಾಣುವಲ್ಲಿ ಅವರು ವಿಫಲರಾದಾಗಿನಿಂದ ಯೇಸುವಿನ ಹಿಂಸೆಯು ಮುಂದುವರೆದಿತ್ತು. [23]Aboth 2:8; quoted in Frank Pack, *The Gospel According to John*, Part 1 (Austin, Tex.: Sweet Publishing Co., 1975), 95. [24]KJVಯಲ್ಲಿನ ಗ್ರೀಕ್ ಪದಗಳು "ಲವವೇಶ" ಮತ್ತು "ಶೀರ್ಷಿಕೆ" ಎಂದು ಭಾಷಾಂತರವಾಗಿ ಪದಗಳು ಮತ್ತಾಯ 5:18ರಲ್ಲಿನ ಇಬ್ರಿಯ ಭಾಷೆಯ ಚಿಕ್ಕ ಅಕ್ಷರಗಳು ಮತ್ತು ಸಣ್ಣದಾಗಿ ಗುರುತು ಹಾಕಿರುವವುಗಳನ್ನು ಸೂಚಿಸುವವುಗಳು ಆಗವೆ. ಹೀಗೆ NASBಯಲ್ಲಿ "ಚಿಕ್ಕ ಅಕ್ಷರಗಳು" ಮತ್ತು "ಹೊಡೆದು ಹಾಕುವದು" ಇವೆ. [25]Warren W. Wiersbe, *The Bible Exposition Commentary*, vol. 1 (Wheaton, Ill.: Victor Books, 1989), 308. [26]ಹಳೆಯ ಒಡಂಬಡಿಕೆಯ ಮೊದಲ ಪುಸ್ತಕಗಳನ್ನು ಮೋಶೆಯು ಬರೆದನು ಎಂಬುದನ್ನು ಕೆಲ ಪಂಡಿತರು ನಿರಾಕರಿಸುವವರಾಗಿದ್ದಾರೆ ಆದರೆ ಅದನ್ನು ಆತನೇ ಮಾಡಿದನು ಎಂದು ಯೇಸು ಹೇಳಿದನು. [27]ಉದಾಹರಣೆಗೆ ಯಜ್ಞದ ನಿಯಮವು ಶಿಲುಬೆಯ ಮೇಲೆ ಬಲಿಯಾದ ಪರಿಪೂರ್ಣತೆಯನ್ನು ಎದುರುನೋಡುವುದಾಗಿತ್ತು (ಇಬ್ರಿಯ 10:4, 12). [28]ಆತನನ್ನು ನಿರಾಕರಿಸುವುದಕ್ಕೆ ಇದೇ ಕಾರಣವಾಗಿತ್ತು ಎಂದು ಯೇಸು ಸೂಚಿಸಿದನು. [29]ಈ ಒಪ್ಪಿಸಿಕೊಳ್ಳುವಿಕೆಯು R. C. Foster, *Studies in the Life of Christ* (Grand Rapids, Mich.: Baker Book House, 1971), 454 ರ ಮೂಲದ ಅನಾಮಧೇಯ ವ್ಯಾಖ್ಯೆಯಿಂದ ಎರವಲು ಪಡೆದದ್ದಾಗಿದೆ. [30]"ಅಸಮರ್ಥವಾದ ಮುಕ್ತಾಯ" ಇದು ಬೇಕಾದರೆ ನಾಲ್ಕನೆಯ ಮುಖ್ಯ ಸಂಗತಿಯಾಗಬಹುದಾಗಿದ್ದು, ಯೇಸುವಿನ ಪ್ರತಿಪಾದನೆಯನ್ನು ಒಬ್ಬನು ಒಪ್ಪಿಕೊಂಡಿದ್ದಾದರೆ, ಅಲ್ಲಿ ಆತನಿಗೆ ಸಂಪೂರ್ಣವಾಗಿ ಒಪ್ಪಿಸಿಕೊಳ್ಳಲು ಅವಶ್ಯವಿರುವ ಕೆಲ "ಅಸಮರ್ಥವಾದ ಮುಕ್ತಾಯ"ಗಳನ್ನು ಒಳಗೊಂಡಿರುವ ಸತ್ಯಾಂಶವನ್ನು ಇದು ಸೂಚಿಸುವುದಾಗಿದೆ.

[31]ಯೋಹಾನನ ಪುಸ್ತಕವು ನಂಬಿಕೆಯನ್ನು ಬೆಳಸಲು ಬರೆಯಲ್ಪಟ್ಟಿದೆ (ಯೋಹಾನ 20:30, 31). ಹಾಗೆ ಮಾಡುವಲ್ಲಿ, ವಿಶ್ವಾಸವಿಡಲು ಬಯಸವವರನ್ನು ಮತ್ತು ತಮ್ಮ ವಿಶ್ವಾಸವಿಡಲು ಬಯಸದಿರುವುದನ್ನು ಹೊರಹಾಕುವುದನ್ನು ಇದು ಗುರುತಿಸುವುದಾಗಿದೆ. [32]C. S. Lewis, *Mere Christianity* (New York: Macmillan Co., 1952), 55-56. [33]ಈ ಪ್ರಸಂಗವನ್ನು ನೀವು ಬೋಧಿಸುವಾಗ ಜನರನ್ನು ಕ್ರೈಸ್ತರಾಗುವಂತೆ ಅಥವಾ ಕ್ರಿಸ್ತನೆಡೆಗೆ ತಮ್ಮ ಸಂಬಂಧವನ್ನು

ಹೊಸದಾಗಿಸಿಕೊಳ್ಳುವಂತೆ ಪ್ರೋತ್ಸಾಹಿಸಬಹುದು. ಕ್ರೈಸ್ತರಾಗುವದು ಹೇಗೆ ಎಂಬುದರ ಮೇಲಿನ ಪರಿಚ್ಛೇದವು ಮಾರ್ಕ 16:15, 16 ಮತ್ತು ಅಪೊಸ್ತಲರ ಕೃತ್ಯಗಳು 2:38ಗಳನ್ನು ಒಳಗೊಂಡಿದೆ.